NS – 020

# ಮೂರನೇ ಸೆಮಿಸ್ಟರ್ ಬಿ.ಎಸ್ಸಿ. ಪರೀಕ್ಷೆ, ನವೆಂಬರ್/ಡಿಸೆಂಬರ್ 2016
## (ರಿಪೀಟರ್ಸ್) (2012 – 13 and Onwards)
## ಕನ್ನಡ ಭಾಷಾ ಪತ್ರಿಕೆ – III
## ಸಾಹಿತ್ಯ ಸಲ್ಲಾಪ - ೨

Time : 3 Hours    Max. Marks : 100

I. ಅ) ಈ ಪದ್ಯದ ಭಾವಾರ್ಥ ಬರೆಯಿರಿ : (1×6=6)

ತಾವರೆಯ ಮಲ್ಲಿಗೆಯ ಪೊಸ
ಸೇವಂತಿಯ ಬಿರಿದ ಸಂಪಗೆಯ ತನಿಗಂ ಪಿಂ
ತೀವಿರ್ಪುದಱೆಂದೆಂದುಂ
ಪೂವಿನ ಪೊಱತಿಂಬುದೊಂದು ಪೆಸರೆಸೆದಿರ್ಕುಂ.

BMSCW

ಆ) ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ : (2×3=6)

ಆಂಡಯ್ಯ, ಎಸ್.ಜಿ. ಸಿದ್ದರಾಮಯ್ಯ, ನಾಟಕ, ಜನನಾಯಕ

II. ಅ) ಐದು ಪದಗಳಿಗೆ ಅರ್ಥ ಬರೆಯಿರಿ : (1×5=5)

ತೊಗಲು, ಕಳವೆ, ತುಂಬಿ, ಪೆಸರ್, ನಿರುಪದ್ರವ, ನೀರವ, ಇಂತಪ್ಪ

ಆ) ಐದು ಪದಗಳಿಗೆ ಮೂಲರೂಪ ಬರೆಯಿರಿ : (1×5=5)

ಬಿಸ್ಕತ್ತು, ಹೋಟೆಲ್ಲು, ನಾಕು, ಮಿಗ, ರಕುತ, ಒಂದೀಟು, ಗೆಣೆಯ.

ಇ) ಐದು ಪದಗಳನ್ನು ಬಿಡಿಸಿ ಬರೆಯಿರಿ : (1×5=5)

ಕತೆಯೊಂದ, ಊರೂರು, ಎಲುವಿನಾಲಯ, ಕಲಿಗಾಲ, ಬೆಂಬತ್ತು, ಐದಾಣೆ, ರಾಜ್ಯವಾಳು.

ಈ) ಐದು ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ : (1×5=5)

ಮೀಸೆ ತಿರುವಿದ, ಪಾದಕಮಲ, ತಲೆದೂಗು, ಬಹುಭಾಷಿಕರು, ದೃಶ್ಯಮಾಧ್ಯಮ, ವೈವಿಧ್ಯತೆ, ಹತೋಟಿ.

III. ನಾಲ್ಕು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ : (4×5=20)

1) ವಿಧಾನ ಸೌಧವು ಯಾವುದರ ಸಂಕೇತವಾಗಿದೆ ?
2) ಕನ್ನಡದ ನುಡಿಬೆರಕೆಯ ಸನ್ನಿವೇಶ ಹೇಗಿದೆ ?

P.T.O.

3) 'ಮಾಲ್'ಗಳ ಸಂಸ್ಕೃತಿಯಿಂದಾಗಿ ನಮ್ಮ ದಿನದಿನದ ಬದುಕು ಏನಾಗುತ್ತಿದೆ ?

4) ಕವಿತೆ ಹುಟ್ಟುವಾಗಿನ ತಲ್ಲಣಗಳು ಎಂತಹವು ?

5) ಆದಿದೇವ ನೋಡುತ್ತಿರುವುದು ಸಾವಿನ ನೃತ್ಯವೇ ?

6) ಮಂಜಣ್ಣನನ್ನು 'ಕಥಾ ಸರಿತ್ಸಾಗರ' ಎಂದು ಕರೆಯಲು ಕಾರಣವೇನು ?

IV. ನಾಲ್ಕು ಪ್ರಶ್ನೆಗಳಿಗೆ ವಿವರವಾದ ಉತ್ತರ ಬರೆಯಿರಿ : **(4×12=48)**

1) "ಕನ್ನಡಮೆನಿಪ್ಪ ನಾಡು ಚೆಲ್ವಾಯ್ತು" ಕಾವ್ಯ ಭಾಗದ ಸಾಂಸ್ಕೃತಿಕ ಮಹತ್ವವನ್ನು ವಿವರಿಸಿ.

**ಅಥವಾ**

'ಶೀಲ'ವನ್ನು ಕುರಿತಂತೆ ಕಡಕೋಳ ಮಡಿವಾಳಪ್ಪನವರ ವಿಚಾರಗಳನ್ನು ಕುರಿತು ಬರೆಯಿರಿ.

2) ಜಾಗತೀಕರಣಕ್ಕೂ ಮತ್ತು ಸ್ಥಳೀಯ ಭಾಷೆಗಳ ನಾಶಕ್ಕೂ ಇರುವ ನಂಟು ಯಾವ ಬಗೆಯದು ?

**ಅಥವಾ**

ಕವಿತೆಯ ಸ್ವರೂಪವನ್ನು ಗುಬ್ಬಚ್ಚಿಯ ಗೂಡಿನ ಪ್ರಸಂಗದೊಂದಿಗೆ ವಿವರಿಸಿ.

3) ಗಂಡು – ಹೆಣ್ಣುಗಳ ನಡುವಿನ ತುಡಿತ ಶ್ರೀಮತಿ ವಜ್ರಜಂಘರ ಸನ್ನಿವೇಶದಲ್ಲಿ ಹೇಗೆ ವ್ಯಕ್ತವಾಗಿದೆ ?

**ಅಥವಾ**

ಕಾಳಿಂಗ, ನಿರೂಪಕ, ಅರಿಕೇಸರಿ – ಇವರಲ್ಲಿ ಇಬ್ಬರನ್ನು ಪರಿಚಯಿಸಿ.

4) 'ಕತೆಗಾರ ಮಂಜಣ್ಣ' ಕತೆಯ ಆಶಯವೇನು ? ವಿವರಿಸಿ.

**ಅಥವಾ**

ಗಿರಿಜಾಳಿಗೆ ನಿಜದ ಅರಿವಾದುದರ ಬಗೆಯನ್ನು ವಿವರಿಸಿ.

---

BMSCW